# ಪ್ರಾಣಿಗಳು ಭವಿಷ್ಯ ನುಡಿಯುತ್ತವೆಯೇ?



ಪ್ರಾಣಿಗಳಲ್ಲಿ ಆರನೇ ಇಂದ್ರಿಯ ಎನ್ನುವುದು ಇಲ್ಲ ಎನ್ನುವುದು ವಿಜ್ಞಾನಿಗಳ ಅಭಿಮತ. ಹಾಗಿದ್ದರೆ ಪ್ರಾಣಿಗಳು ಪ್ರಾಕೃತಿಕ ಅನಾಹುತಗಳ ಮುನ್ಸೂಚನೆ ನೀಡುವುದು ಹೇಗೆ?

■ ರಾಜೇಶ್ವರಿ ಜಯಕೃಷ್ಣ

ಇತ್ತೀಚೆಗೆ ನಡೆದ ಫಿಫಾ ವಿಶ್ವಕಪ್ ಫುಟ್‌ಬಾಲ್‌ನ ಆರಂಭಿಕ ಪಂದ್ಯದಲ್ಲಿ ಇಂಥದ್ದೇ ತಂಡ ಜಯ ಸಾಧಿಸುತ್ತದೆ ಎಂದು ಭವಿಷ್ಯ ನುಡಿದದ್ದು ಯಾರು ಗೊತ್ತೇ? ಕಿವಿ ಕೇಳಿಸದ ಒಂದು ಬೆಕ್ಕು! ಪಂದ್ಯಾವಳಿಯ ಉದ್ಘಾಟನೆಯ ದಿನ ರಷ್ಯಾ ಮತ್ತು ಸೌದಿ ಅರೇಬಿಯಾ ನಡುವೆ ನಡೆದ ಪಂದ್ಯಕ್ಕೂ ಮುನ್ನ ಬೆಕ್ಕಿನ ಭವಿಷ್ಯ ಕೇಳಲಾಗಿತ್ತು. ಅದು ರಷ್ಯಾ ಗೆಲುವು ಸಾಧಿಸುತ್ತದೆ ಎಂದು ಭವಿಷ್ಯ ನುಡಿದಿತ್ತು. ಅದರ ಭವಿಷ್ಯ ಸುಳ್ಳಾಗಲಿಲ್ಲ.

ಸೆಮಿಫೈನಲ್ ಫಲಿತಾಂಶವನ್ನು ಕೂಡಾ ಇದೇ ಬೆಕ್ಕು ಮೊದಲೇ ಊಹಿಸಿ ಹೇಳಿತ್ತು! ಸ್ಪರ್ಧೆಯ ಕಣದಲ್ಲಿರುವ ದೇಶಗಳ ಧ್ವಜವನ್ನು ತಿಂಡಿಯುಳ್ಳ ಪ್ರತ್ಯೇಕ ಪಾತ್ರೆಗಳಲ್ಲಿ ಇರಿಸಲಾಗಿತ್ತು. ಈ ಬೆಕ್ಕು ಗೆಲ್ಲಲಿರುವ ದೇಶದ ಧ್ವಜವಿರುವ ಪಾತ್ರೆಯಿಂದ ತಿನಿಸು ತಿನ್ನುವ ಮೂಲಕ ಯಾವ ತಂಡ ಗೆಲ್ಲಬಹುದೆಂಬ ಮುನ್ಸೂಚನೆಯನ್ನು ಕೊಟ್ಟಿತ್ತು.

ಅಂದ ಹಾಗೆ ಈ ಬೆಕ್ಕಿನ ಹೆಸರು ಅಚಿಲಿಸ್. ಇದು ವಾಸಿಸುವುದು ಎಲ್ಲಿ ಗೊತ್ತೇ? ರಷ್ಯಾದ ಸೈಂಟ್ ಪೀಟರ್ಸ್‌ಬರ್ಗ್ ಹರ್ಮಿಟೇಜ್ ಮ್ಯೂಸಿಯಂನ ನೆಲಮಾಳಿಗೆಯಲ್ಲಿ!

ಇದೊಂದು ರೀತಿಯ ಹುಚ್ಚು ಎಂದು ನಿಮಗೆ ಅನ್ನಿಸಬಹುದು. ಆದರೆ ಲಕ್ಷಾಂತರ ಮಂದಿ ಈ ಭವಿಷ್ಯವನ್ನು ನಂಬಿದ್ದಾರೆ ಎನ್ನುವುದು ಕುತೂಹಲಕರ ಸಂಗತಿ. ಹಾಗಾದರೆ ಪ್ರಾಣಿಗಳು ಸೂಕ್ಷ್ಮಗ್ರಾಹಿಗಳೇ? ಮಾನವರಿಗಿಂತಲೂ ಹೆಚ್ಚು ಗ್ರಹಿಕೆಯ ಸಾಮರ್ಥ್ಯ ಅವುಗಳಲ್ಲಿ ಇದೆಯೇ? ಸೂಕ್ಷ್ಮಾತಿಸೂಕ್ಷ್ಮ ವಿಷಯಗಳನ್ನು ಅವು ನಮಗಿಂತಲೂ ಶೀಘ್ರವಾಗಿ ಗ್ರಹಿಸುತ್ತವೆಯೇ? ಮುಂದೆ ಘಟಿಸುವುದನ್ನು ನಮಗಿಂತಲೂ ಕರಾರುವಾಕ್ಕಾಗಿ ಹೇಳುತ್ತವೆಯೇ?

ಈ ಪ್ರಶ್ನೆಗಳಿಗೆ ಉತ್ತರ ಸುಲಭವಲ್ಲ. ಆದರೆ ಕೆಲವು ಸಂದರ್ಭ ಮತ್ತು ಘಟನೆಗಳು ಇದನ್ನು ಪುಷ್ಟೀಕರಿಸುತ್ತವೆ ಎನ್ನುವುದು ನಿಜ. ವಿಚಾರವಾದಿಗಳ ಪ್ರಕಾರ ಇದೆಲ್ಲ ಕಾಕತಾಳೀಯ ಅಷ್ಟೆ! ಕಾಗೆ ಬಂದು ಮರದ ಮೇಲೆ ಕುಳಿತುಕೊಳ್ಳುವುದಕ್ಕೂ, ಮರ ಬೀಳುವುದಕ್ಕೂ ಸರಿ ಹೋಯಿತು.. ಎನ್ನುವಂತೆ.

ಅಮೆರಿಕದಲ್ಲಿ ಡೊನಾಲ್ಡ್ ಟ್ರಂಪ್ ಗೆಲುವು ಸಾಧಿಸಬಹುದು ಎಂದು ಹಂದಿಯೊಂದು ಮೊದಲೇ ಮುನ್ಸೂಚನೆ ನೀಡಿತ್ತಂತೆ. 2014ರ ವಿಶ್ವ ವಿಂಬಲ್ಡನ್ ಟೆನ್ನಿಸ್ ಫೈನಲ್‌ನಲ್ಲಿ ಇಂಥದೇ ದೇಶ ಗೆಲುವು ಸಾಧಿಸಬಹುದೆಂದು ಕರಿ ಹಂದಿಯೊಂದು ಭವಿಷ್ಯ ನುಡಿದಿತ್ತಂತೆ.

ಮೇಕೆ, ಜಪಾನಿನ ಅಕ್ಟೋಪಸ್, ಪೆಂಗ್ವಿನ್ ಮತ್ತು ಇರುವೆಗಳು ಕೂಡ ಮುಂದಾಗುವುದನ್ನು ತಿಳಿಸಿದ್ದುಂಟು. ಅವು ನಿಜವೂ ಆಗಿವೆ!

ಇಂಗ್ಲೆಂಡ್‌ನ ಬರ್ಮಿಂಗ್‌ಹ್ಯಾಮ್ ‘ಸೀ ಲೈಫ್ ಸೆಂಟರ್’ನ ಪೆಂಗ್ವಿನ್‌ಗಳು ಕ್ರೀಡೆಗಳಲ್ಲಿ ಇಂಗ್ಲೆಂಡಿನ ವಿಜಯವನ್ನು ಮುಂಚಿತವಾಗಿ ತಿಳಿಸಿದ್ದು, ಅದು ನಿಜವೂ ಆಗಿದೆ. ಅಲ್ಲಿ ಬಂಡೆಗಳ ಮೇಲೆ ವಿವಿಧ ದೇಶಗಳ ಧ್ವಜವನ್ನು ನೆಡಲಾಗುತ್ತಿತ್ತು. ಗೆಲ್ಲುವ ದೇಶದ ಧ್ವಜವಿರುವ ಬಂಡೆಯ ಮೇಲೆ ಈ ಪೆಂಗ್ವಿನ್‌ಗಳು ಕುಳಿತುಕೊಳ್ಳುತ್ತಿದ್ದವು!

## ಭಾರತದಲ್ಲೂ ಮುನ್ಸೂಚನೆ

ಕೇವಲ ವಿದೇಶಗಳಲ್ಲಷ್ಟೇ ಅಲ್ಲ, ಭಾರತದಲ್ಲೂ ಪ್ರಾಣಿಗಳು ಪ್ರಕೃತಿ ವಿಕೋಪದ ಮುನ್ಸೂಚನೆ ನೀಡಿವೆ ಎನ್ನುತ್ತಾರೆ ಅಹಮದಾಬಾದ್‌ನ ಅರಣ್ಯಾಧಿಕಾರಿಗಳು.

ಇತ್ತೀಚೆಗೆ ನಡೆದ ಈ ಘಟನೆಯನ್ನೊಮ್ಮೆ ಗಮನಿಸಿ. ಬೆಳೆದು ನಿಂತ ಪೈರುಗಳನ್ನು ಮೇಯಲು ನೀಲ್‌ಗಾಯ್ ಅಥವಾ ನೀಲಿ ಜಿಂಕೆಗಳು ತಂಡೋಪತಂಡವಾಗಿ ಬರುತ್ತಿದ್ದವು. ಸೌರಾಷ್ಟ್ರದ ರೈತರಿಗೆ ಈ ನೀಲಿ ಜಿಂಕೆಗಳು ತಲೆನೋವಾಗಿ ಪರಿಣಮಿಸಿದ್ದವು. ಒಂದು ದಿನ ಕಾರ್ಮಿಕರ ಗುಂಪೊಂದು